Sri H. LINGA REDDY.—Has the Hon'ble Minister for Animal Husbandry gone through the previous Budget and found out that there was a place in that Budget for a dairy farm at Bellary ? I want to know whether there is any chance for starting a dairy farm in Bellary now at least ?

† ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಸದಸ್ಯರು ಕೇಳಿರತಕ್ಕ ಪ್ರಶ್ನೆಗೆ ಉತ್ತರವಾಗಿ ಸರ್ಕಾರ ಇನ್ನೂ ಏನೂ ತೀರ್ಮಾನ ಕೈಕೊಂಡಿಲ್ಲ. ಆ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

Sri H. LINGA REDDY.—It was in the Budget. I have seen that the previous Government wanted to start a dairy farm. Do you now consider that Bellary deserves a dairy farm ?

Sri N. CHIKKE GOWDA.—As per information that is available before me, there was a proposal to start five dairies, at Raichur, Bellary, Hassan, Bijapur and Kamatgi. In 1971-72 it was decided to start dairies at Bijapur, Hassan, Kamatgi and the Director of Animal Husbandry and Dairy Services has sent up proposals for starting a dairy at Bellary and it is before the Government for consideration.

ಶ್ರೀ ಶರಣಪ್ಪ.—ಬಳ್ಳಾರಿ ಮತ್ತು ರಾಯಚೂರಿನಲ್ಲಿ ಹಾಲಿನ ಡೈರಿಯನ್ನು ತೆಗೆಯಲು ಸಾಧ್ಯವಾಗುವುದಿಲ್ಲ ಎನ್ನುವುದಕ್ಕೆ ತಮ್ಮ ಇಲಾಖೆಯ ಡೈರೆಕ್ಟರ್ ಅವರು ಏನು ಕಾರಣಗಳನ್ನು ತೋರಿಸಿದ್ದಾರೆ ?

ಶ್ರೀ ಎನ್. ಚಿಕ್ಕೇ ಗೌಡ.—ರಾಯಚೂರು ಪ್ರಶ್ನೆ ನನ್ನ ಮುಂದಿಲ್ಲ.

ಶ್ರೀ ಶರಣಪ್ಪ.—ರಾಯಚೂರು ಬಳ್ಳಾರಿ ಮೊದಲಾದ ಮೂರು ಡಿಸ್ಟ್ರಿಕ್ಟ್‌ಗಳಲ್ಲಿ ಹಾಲಿನ ಡೈರಿ ತೆಗೆಯುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದೀರಿ. ಅದಕ್ಕೆ ಕಾರಣವೇನು ?

ಶ್ರೀ ಎನ್. ಚಿಕ್ಕೇ ಗೌಡ.—ಬಳ್ಳಾರಿ, ರಾಯಚೂರಿನಲ್ಲಿ ಹಾಲಿನ ಡೈರಿಯನ್ನು ತೆಗೆಯುವುದಕ್ಕೆ ಆಗುವುದಿಲ್ಲ, ಎಂದು ನಾನು ಹೇಳಲಿಲ್ಲ. ಮೂರು ಕಡೆ ಹಾಲಿನ ಡೈರಿಗಳನ್ನು ಮಂಜೂರು ಮಾಡಿದ್ದೇವೆ. ಬಳ್ಳಾರಿಯ ಪ್ರಶ್ನೆ ಸರ್ಕಾರದ ಮುಂದೆ ಇದೆ, ಪರಿಶೀಲನೆ ಮಾಡಿದನಂತರ ನಿಖರವಾದ ಉತ್ತರ ನೀಡುವುದಕ್ಕೆ ಸಾಧ್ಯವಿದೆ.

State Pattern Health Units in Shahapur Taluk

277. Sri BAPU GOWDA RAYAPPA (Shahapur).—

Will the Minister for Health be pleased to state :—

(*a*) whether the Taluk Board, Shahapur, has sent proposals to the Director of Health Services to start State Pattern Health Units in Hondurg and Hyal Villages in Shahapur Taluk of Gulbarga District ;

(*b*) if so, when the proposals were sent ;

(*c*) whether these proposals are pending since a long time, with the Director of Health Services ;

(*d*) if so, when the Government would sanction these proposals ?

Sri H. SIDDAVEERAPAA (Minister for Health).—

(*a*) Yes. The Taluk Board, Shahapur, had sent the proposal to the District Health and Family Planning Officer, Gulbarga, who has turn sent them to the Director of Health and Family Planning Services, Bangalore.

(*b*) On 27th August 1971.

(*c*) The proposals were pending in the Directorate for some time for want of some information.

(*d*) The proposals have been received by Government and are under their consideration.

ಶ್ರೀ ಬಾಪುಗೌಡ ರಾಯಪ್ಪ.—ಸ್ವಾಮಿ, ತಮ್ಮ ಉತ್ತರದಲ್ಲಿ ಹೇಳಿದ ಪ್ರಕಾರ ಸಹಪುರ ತಾಲ್ಲೂಕಿನ ಹೊಂದುರ್ಗ ಮತ್ತು ಹ್ಯಾಳ್ ಗ್ರಾಮಗಳಲ್ಲಿ ರಾಜ್ಯ ವಾದರಿ ಆರೋಗ್ಯ ಘಟಕಗಳನ್ನು ಪ್ರಾರಂಭಿಸಲು ಕಳುಹಿಸಿದ ಪ್ರಪೋಸಲ್ಸ್ ಡೈರೆಕ್ಟರ್ ಅವರ ಆಫೀಸಿನಲ್ಲಿ ಪೆಂಡಿಂಗ್ ಇದೆ ಎಂದು ಕಾಣುತ್ತದೆ. ಈಗ ಸದ್ಯದಲ್ಲಿ ಆ ಪ್ರಪೋಸಲ್ ಡೈರೆಕ್ಟರ್ ಅವರಿಂದ ಸೆಕ್ರಟರಿ, ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಹೋಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

† ಶ್ರೀ ಎಚ್. ಸಿದ್ದವೀರಪ್ಪ.—ಈಗ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ, ನಾನು ಕೇಳುತ್ತಾ ಇದ್ದೇನೆ.

Sri BAPU GOWDA RAYAPPA.—If they are pending in the Finance Department, may I know whether it will be considered and sanctioned as early as possible ?

Sri H. SIDDAVEERAPPA.—Yes, it will be considered.

ಶ್ರೀ ಎಂ. ಬಿ. ರಾಮಸ್ವಾಮಿ.—ಡೈರೆಕ್ಟರ್ ಅವರ ಆಫೀಸಿನಲ್ಲಿ ಪೆಂಡಿಂಗ್‌ನಲ್ಲಿದೆ ಫಾರ್ ವಾಂಟ್ ಆಫ್ ನಂ ಇನ್‌ಫರ್ಮೇಷನ್ ಎಂದು ತಿಳಿಸಿದ್ದೀರಿ. 'ನಂ ಇನ್‌ಫರ್ಮೇಷನ್' ಎಂದರೆ ಚೆಕ್ಕ್ ಕರ್ ಡಿಫಿಕಲ್ಟಿಯೇ ಅಥವಾ ಇನ್ನು ಏನಾದರೂ ಮಾಹಿತಿ ಬೇಕೆ ಎಂದು ತಿಳಿಸುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—"ನಂ ಇನ್‌ಫರ್ಮೇಷನ್" ಎಂದರೆ ಪೇಪರ್ ಸರಿಯಾಗಿ ಮುಂದುವರಿಯಬೇಕಾದರೆ ಗವರ್ನಮೆಂಟ್ ಗ್ರಾಂಟ್ಸ್ ರೂಲ್ಸ್ ಪ್ರಕಾರ, ತಾಲ್ಲೂಕು ಬೋರ್ಡ್ ರೆಸಲ್ಯೂಷನ್ ಇದೆಯೇ ಇಲ್ಲವೇ ಎಂಬುದನ್ನು ನೋಡಬೇಕು. ಇನ್ನೂ ಏನೇನು ಫಾರ್ಮ್ಯಲಿಟೀಸ್ ಆಗಬೇಕೋ ಅವೆಲ್ಲಾ ಆಗಿದೆಯೇ ಇಲ್ಲವೇ ಎಂಬುದನ್ನು ನೋಡಬೇಕು. ಅದಕ್ಕೋಸ್ಕರ ಹಾಗೆ ಹೇಳಿದ್ದಾರೆ. ಇದನ್ನೆಲ್ಲಾ ಯೋಚನೆ ಮಾಡಿ, ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಹೋಗಿದ್ದಾರೆ, ಅದನ್ನು ಕನ್‌ಸಿಡರ್ ಮಾಡುತ್ತೇವೆ. ಇತ್ತೀಚೆಗೆ ಸರ್ಕಾರದವರು ಒಂದು ತಿರ್ಮಾನವನ್ನು ತೆಗೆದು ಕೊಂಡಿದ್ದಾರೆ. ಏನೆಂದರೆ ರೆಕರಿಂಗ್ ಎಕ್ಸ್‌ಪೆಂಡೀಚರ್ ಎಲ್ಲಾ ತಾಲ್ಲೂಕು ಬೋರ್ಡಿಗೆ ವಹಿಸ ಬೇಕೆಂದು ಕೂತುಕೊಂಡರೆ ಹಳ್ಳಿಗಳಲ್ಲಿ ಸರಿಯಾಗಿ ವೈದ್ಯಕೀಯ ಸರ್ವೀಸ್ ಸಿಗುವುದಿಲ್ಲ. ಆದ್ದರಿಂದ ತಾಲ್ಲೂಕು ಬೋರ್ಡು ಕಾಂಟ್ರಿಬ್ಯೂಷನ್ ಅನ್ನು ಬಿಟ್ಟುಬಿಡಬೇಕೆಂದು ಸರ್ಕಾರ ತೀರ್ಮಾನ ತೆಗೆದು ಕೊಂಡಿದ್ದೇವೆ ಮತ್ತು ಎಲ್ಲಾ ಆಸ್ಪತ್ರೆಗಳನ್ನು ಸರ್ಕಾರವೇ ವಹಿಕೊಳ್ಳಬೇಕೆಂದು ಮಾಡಿದ್ದೇವೆ. ಅದರ ಮೇಲೆ ಯೋಚನೆ ಮಾಡುತ್ತಿದ್ದೇವೆ.

Sri RAJA PID NAIK.—May I know how many health unit type despensaries will be opened in every taluk ?

Sri H. SIDDAVEERAPPA.—That is under examination. As a matter of fact, as far as possible we must have at least one health unit in every block and if necessary the policy will be to have one health unit or a sub-centre for a population of not less than 15,000.

Sri PRABHAKAR TELKAR.—Is the Government taking any action ato establish health units where there are more than ten thousand people nd where there are absolutely no health units both private as well as Governm ent ?

Sri H. SIDDAVEERAPPA.—Yes, we will consider. As far as possible, where there are centres or health units for a population of 15,000, Government are considering to have one centre.

ಶ್ರೀ ಕೆ. ಎಚ್. ಹನುಮೇಗೌಡ.—ಸರ್ಕಾರ ಎಲ್ಲಾ ಆಸ್ಪತ್ರೆಗಳನ್ನು ವಹಿಸಿಕೊಳ್ಳುತ್ತದೆ ಎಂದು ಹೇಳಿದ್ದೀರಿ, ತಾಲ್ಲೂಕು ಬೋರ್ಡಿನವರು ಆಯುರ್ವೇದ ಆಸ್ಪತ್ರೆಗಳನ್ನು ನಡೆಸುತ್ತಿದ್ದಾರೆ. ಅವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಎಲ್ಲಾ ಆಸ್ಪತ್ರೆಗಳು ತಾಲ್ಲೂಕು ಬೋರ್ಡಿಗೆ ಭಾರ ಆಗಬಾರದು, ಅವರ ಭಾರವನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ.

ಶ್ರೀ ಬಿ. ಬೈರಪ್ಪಾಜಿ.—ತಾಲ್ಲೂಕು ಬೋರ್ಡಿನವರು, 8—10 ವರ್ಷದಿಂದ ಕೊಡಬೇಕಾದ ಬಾಕಿ ಉಳಿದಿರುವುದರಿಂದ, ಈ ಬಾಕಿಯನ್ನು ವಜಾ ಮಾಡಿ, ಇನ್ನು ಮುಂದೆ ಒಳ್ಳೆಯ ಸಂಪ್ರದಾಯವನ್ನು ಹಾಕುತ್ತೀರಾ ? ತಾಲ್ಲೂಕು ಬೋರ್ಡಿಗೆ ಹೆಚ್ಚು ಹೊರೆಯಾಗಬಾರದು ಎಂದು ಹಿಂದಿನ ಬಾಕಿಯನ್ನು ವಜಾ ಮಾಡುವುದರ ಮೂಲಕ ತಾಲ್ಲೂಕು ಬೋರ್ಡುಗಳ ಆರ್ಥಿಕ ಪರಿಸ್ಥಿತಿ ಉತ್ತಮಪಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಇದನ್ನು ಮಾನ್ಯ ಸ್ನೇಹಿತರಾದ ಶ್ರೀಮಾನ್ ಘೋರ್ಪಡೆಯವರು ಹೇಳಬೇಕು. ಸುಮಾರು ಮೂರು ಕೋಟಿ ರೂಪಾಯಿಗಳ ಬಾಕಿ ಉಳಿದುಕೊಂಡು ಬಂದಿದೆ. ಈ ವಿಚಾರವನ್ನು ಫೈನಾನ್ಸ್ ಡಿಪಾರ್ಟ್‌ಮೆಂಟಿನವರು ಆರೋಜನೆ ಮಾಡಬೇಕು.

ಶ್ರೀ ಜೆ. ವೆಂಕಟಪ್ಪ.—ಸಾಧ್ಯವಿ, ಪ್ರತಿಯೊಂದು ಬ್ಲಾಕ್‌ನಲ್ಲೂ ಹೆಲ್ತ್ ಯೂನಿಟ್ ಟೈಪ್ ಸೆಂಟರುಗಳನ್ನು ಮಾಡಬೇಕು ಎಂದು ಹೇಳಿದ್ದೀರಿ. ಆದರೆ ತಮ್ಮ ಆರೋಗ್ಯ ಇಲಾಖೆಯವರು ಬ್ಲಾಕ್ ಮಾಡಿದಾಗ ಕೆಲವು ಊರುಗಳಿಗೆ ಗುಡ್ಡಗಳನ್ನು ಸೇರಿಸಿರುತ್ತಾರೆ; ಅವಕ್ಕೆ ದಾರಿಗಳೇ ಇರುವುದಿಲ್ಲ, ಅಂಥದ್ದು ಸೇರಿಸಿ ಬ್ಲಾಕ್ ಮಾಡಿದ್ದಾರೆ. ಅದನ್ನು ಬದಲಾಯಿಸಿ ಅಂಥ ಕಡೆ ಒಂದು ಹೆಲ್ತ್ ಯೂನಿಟ್ ಟೈಪ್ ಡಿಸ್ಪೆನ್ಸರಿಗಳನ್ನು ಕೊಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ವಿಚಾರ ಮಾಡೋಣ, ಎಲ್ಲಿ ಬ್ಲಾಕು ಡಿವಿಷನ್ ಸರಿಯಾಗಿ ಆಗದಿದ್ದರೆ, ವಿಚಾರ ಮಾಡಿ ಬ್ಲಾಕ್ ರಿಆರ್ಗನೈಸ್ ಮಾಡಲಿಕ್ಕೆ ಬೇಕಾದರೆ ಹೇಳೋಣ.

ಶ್ರೀ ಎಚ್. ಎಸ್. ಸಿದ್ದಪ್ಪ.—ಕೆಲವೊಂದು ಮಾಹಿತಿ ಬೇಕಾಗಿದ್ದರಿಂದ ಆರೋಗ್ಯ ಇಲಾಖೆಯಲ್ಲಿ ಈ ಪ್ರಶ್ನೆ ಇತ್ಯರ್ಥವಾಗದೆ ಉಳಿದಿದೆ ಎಂದು ಹೇಳಿದ್ದೀರಿ; ನಿನ್ನೆ ಮುಖ್ಯಮಂತ್ರಿಗಳು ಮಾತನಾಡುತ್ತಾ ಹೇಳಿದರು, ಒಂದೊಂದು ಕಡೆ ಅಧಿಕಾರಿಗಳು ಸುಮ್ಮನೆ ಕೊಕ್ಕೆ ಹಾಕುತ್ತಾರೆ ಎಂದು, ನಿಮ್ಮ ಆರೋಗ್ಯ ಇಲಾಖೆಯಲ್ಲಿ ಕೆಲವೊಂದು ವಿಚಾರಗಳನ್ನು ಒಟ್ಟಿಗೇ ಕೇಳದೆ, ಒಂದೊಂದು ಮಾಹಿತಿಗೆ ಒಂದೊಂದು ಸಲ ಕೇಳುವ ತರಹ ಆಗುತ್ತದೆ. ಆದ್ದರಿಂದ ಇದನ್ನು ತಪ್ಪಿಸುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಇದು ನಿಮಗೆ ಅನುಭವವಾಗಿರಬಹುದು, ಆದರೆ ನಮ್ಮ ಇಲಾಖೆಯಲ್ಲಿ ಕೊಕ್ಕೆ ಹಾಕುವುದಕ್ಕೆ ಬರುವುದಿಲ್ಲ.

Land Acquisition cases in Dharwar District

298. **Sri B. G. BANAKAR** (Hirekerur).—

Will the Minister for Revenue be pleased to state :—

(*a*) the total number of land acquisition cases in respect of village extension pending in Dharwar District as on the last available date ;